ಇರಲಿಲ್ಲ. ಇದರಿಂದಾಗಿ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೊಂದು ಜ್ವಲಂತ ಸಮಸ್ಯೆಯಾಗಿದೆ. ಈ ಸಹಸ್ರಾರು ಭೂಹೀನ ಬಡ ಕೃಷಿ ಕೂಲಿಕಾರರಿಗೆ ನ್ಯಾಯಬದ್ಧವಾದ ಮನೆ ನಿವೇಶನದ ಹಕ್ಕು ನೀಡಲು ಆರ್ಜಿ ಸಲ್ಲಿಸುವ ಅವಧಿಯನ್ನು ಮತ್ತೊಮ್ಮೆ ವಿಸ್ತರಿಸಿ, ಅವಕಾಶ ಕಲ್ಪಿಸಬೇಕು. ಆರ್ಥಿಕವಾಗಿ ಇವರಿಗಿಂತ ಮೇಲ್ಮಟ್ಟದಲ್ಲಿರುವ ನಗರಪ್ರದೇಶದ ಬಾಡಿಗೆದಾರರಿಗೆ ರಕ್ಷಣೆಯ ಕಾನೂನು ಇದ್ದು, ಹಳ್ಳಿಯ ಬಡವರಿಗೆ ಯಾವ ರಕ್ಷಣೆಯೂ ಇಲ್ಲದಿರುವುದು ಶೋಚನೀಯ. ಆರ್ಜಿಹಾಕುವ ಸಮಯ ವಿಸ್ತರಿಸಬೇಕು. ಶಿಕ್ಷಲೆಬ್ಬಿಸದಂತೆ ರಕ್ಷಣೆ ನೀಡಬೇಕು. ಬಡ ಕೃಷಿ ಕೂಲಿಕಾರರಿಗಾಗುತ್ತಿರುವ ಅನ್ಯಾಯವನ್ನು ತಪ್ಪಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ). —ಮಾನ್ಯ ಅಧ್ಯಕ್ಷರೆ, ಸದರಿ ಪ್ರಶ್ನೆ ಬಗ್ಗೆ ಹೆಚ್ಚಿನ ಪರಿಶೀಲನೆಯನ್ನು ಮಾಡಲಾಯಿತು. ಆರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸಿದಲ್ಲಿ ಜೋಪಾ ಹಾಗೂ ದುರದ್ದೇಶದಿಂ ಆರ್ಜಿಗಳನ್ನು ಹೆಚ್ಚಾಗಿ ಸಲ್ಲಿಸಬಹುದಾಗಿದ್ದರಿಂದ ಹಾಗೂ ಈಗಾಗಲೇ ವಿಸ್ತರಿಸಿದ ಅವಧಿ ಸಾಕಷ್ಟು ಇದ್ದು ಹೆಚ್ಚಿನ ಅವಧಿ ಸರಿ ಅಲ್ಲವೆಂದು ಕಂಡುಬಂದಿದ್ದು ಅವಧಿ ವಿಸ್ತರಿಸುವ ವಿಷಯವನ್ನು ಕೈಬಿಡಲಾಗಿದೆ.

೩ ಮಂಗಳೂರು ನ್ಯಾಯಾಲಯ ಸಮುಚ್ಚಯಕ್ಕೆ ಎರಡನೆಯ ಹಂತದ ವಿಸ್ತರಣೆ.

ಶ್ರೀ ಬ್ಲೇಸಿಯಸ್ ಎಂ. ಡಿ'ಸೋಜ.—ಮಾನ್ಯ ಅಧ್ಯಕ್ಷರೇ, ಮಂಗಳೂರಿನಲ್ಲಿರುವ ಕೋರ್ಟ್ ಕಾಂಪ್ಲೆಕ್ಸ್ ಕಟ್ಟಡಕ್ಕೆ ೨ನೇ ಹಂತದ ವಿಸ್ತರಣೆ ಅತಿ ಅಗತ್ಯ. ಈ ಕುರಿತು ಅನೇಕ ವರ್ಷಗಳಿಂದ ಸರಕಾರದ ಮುಂದೆ ಬೇಡಿಕೆ ಇದೆ. ಅನೇಕ ಬಾರಿ ಒತ್ತಾಯಿಸಲಾಗಿದೆ. ತಾರೀಖು ೨೨-೧೧-೮೫ರ ಸರ್ಕಾರಿ ಆಜ್ಞೆ ಪ್ರಕಾರ ರೂ.೧೨ ಲಕ್ಷದ ಕಾಮಗಾರಿಗೆ ಆಡಳಿತ ಮಂಜೂರಾತಿ ನೀಡಲಾಗಿದೆ. ದಿನಾಂಕ ೧೫-೧-೮೬ರಂದು ಮುಖ್ಯ ಇಂಜಿನಿಯರ್‌ರವರು ರೂ. ೧೩ ಲಕ್ಷಕ್ಕೆ ತಾಂತ್ರಿಕ ಮಂಜೂರಾತಿ ನೀಡಿದ್ದಾರೆ. ಆದರೆ ಕಳೆದ ಎರಡೂವರೆ ವರ್ಷಗಳಿಂದಲೂ ಈ ಕೆಲಸ ಪ್ರಾರಂಭ ಆಗಿಲ್ಲ. ನ್ಯಾಯಾಲಯ ಕಟ್ಟಡ ವಿಸ್ತರಣೆ ಆಗದಿರುವುದು ಪರಮ ಅನ್ಯಾಯ. ೨ನೇ ಹಂತದ ಕಾಮಗಾರಿ ಕೆಲಸಕ್ಕಾಗಿ ಕರ್ನಾಟಕ ಉಚ್ಚ ನ್ಯಾಯಾಲಯದವರು ಸರ್ಕಾರದ ಗಮನ ಸೆಳೆದಿದ್ದಾರೆ. ಆದ್ದರಿಂದ ಕಾಮಗಾರಿ ಕೂಡಲೇ ಪ್ರಾರಂಭವಾಗಬೇಕು, ನ್ಯಾಯಾಲಯ ಕಟ್ಟಡ ರಚನೆಯಲ್ಲಿ ನ್ಯಾಯ ದೊರಕಬೇಕು ಎಂದು ಸರಕಾರವನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಆಹಾರ ಸಚಿವರು).—ಸರ್ಕಾರವು ೧೯೮೫-೮೬ನೇ ಸಾಲಿನಲ್ಲಿ ಮಂಗಳೂರಿನ ನ್ಯಾಯಾಲಯ ಸಮುಚ್ಚಯಕ್ಕೆ, ಹೊಂದಿಕೊಂಡ ಕಟ್ಟಡದ ಮೇಲೆ ಎರಡನೇ ಹಂತದ ನಿರ್ಮಾಣಕ್ಕಾಗಿ ನಕ್ಷೆಗಳು ಮತ್ತು ೧೨-೦೦ ಲಕ್ಷ ರೂಪಾಯಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ. ಹಣದ ಕೊರತೆಯಿಂದಾಗಿ, ಮಂಗಳೂರಿನಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ೧೯೮೫-೮೬ನೇ ಸಾಲಿನ ಬಜೆಟ್‌ನಲ್ಲಿ ನಿರ್ಧಾರ ಮಾಡುವುದು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಆದರೆ ಪ್ರಸ್ತುತ ವರ್ಷದಲ್ಲಿಯೇ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ೧೯೮೫ರ ಡಿಸೆಂಬರ್‌ನಲ್ಲಿ ಪೂರಕ ಅನುದಾನಗಳ ಅಡಿಯಲ್ಲಿ ನಿರ್ಧಾರ ಮಾಡಲು ಹಣಕಾಸು ಇಲಾಖೆಯೊಂದಿಗೆ ಸಮಾಲೋಚಿಸುತ್ತಿದ್ದೇವೆ.

೪ ಮಂಗಳೂರಿನ ಹಳೆಯ ಬಂದರಿನ ಅಳಿವೆ ಬಾಗಿಲಿನಲ್ಲಿ ಹೂಳೆತ್ತದೆ ಇದ್ದುದರಿಂದ ಮೀನುಗಾರರ ದೋಣಿಗಳಿಗೆ ಹಾನಿಯಾಗಿ ಪ್ರಾಣ ನಷ್ಟವಾಗಿರುವುದಿನ್ನು.

ಶ್ರೀ ಬಿ.ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಮಂಗಳೂರು ಹಳೆ ಬಂದರಿನ ಅಳಿವೆ ಬಾಗಿಲಿನಲ್ಲಿ ಹೂಳೆತ್ತದೆ ಇದ್ದುದರಿಂದ ಕಳೆದ ನಾಲ್ಕೈದು ವರ್ಷಗಳಿಂದ, ಮಳೆಗಾಲ ದಿನ್ನೆಗೆ ತಾಗಿ ಸಮುದ್ರಕ್ಕೆ ಗಟ್ಟಲೆ ಮೀನುಗಾರರ ದೋಣಿಗಳು ನಾಶವಾಗಿವೆ. ೧೫ಕ್ಕೂ ಮಿಕ್ಕಿ

ಮೀನುಗಾರರು ಮೃತಪಟ್ಟಿರುತ್ತಾರೆ. ಆದರೆ ಇದೀಗ ೨೫-೯-೮೮ರಂದು ಮರಳು ದಿಣ್ಣೆಗೆ ತಾಗಿ ನಾಲ್ಕು ನೌಕೆಗಳು ನಾಶವಾಗಿ, ಒಬ್ಬ ಮೀನುಗಾರರು ಮೃತಪಟ್ಟಿರುತ್ತಾರೆ. ಅಲ್ಲದೆ ೨೯-೯-೮೮ರಂದು ಪುನಃ ಮರಳ ದಿಣ್ಣೆಗೆ ಅಪ್ಪಳಿಸಿ ಎಂಟು ನೌಕೆಗಳು ಮುಳುಗಿ ನಾಶವಾಗಿವೆ. ಒಬ್ಬ ಮೀನುಗಾರ ಮೃತಪಟ್ಟಿರುತ್ತಾನೆ. ಒಬ್ಬರ ಸ್ಥಿತಿ ಚಿಂತಾಜನಕವಾಗಿದೆ. ಹೂಳೆತ್ತದೆ ಇದ್ದುದರಿಂದ ಒಟ್ಟು ೧೨ ನೌಕೆಗಳು ಮುಳುಗಿದಂತಾಯಿತು. ಸುಮಾರು ೧೬ ಲಕ್ಷಕ್ಕೂ ಮಿಕ್ಕ ನಷ್ಟವಾಗಿದೆ. ಕಳೆದ ಮೂರು ವರ್ಷಗಳಿಂದ ವಿಧಾನ ಮಂಡಲದಲ್ಲಿ ನಾನು ಪ್ರಸ್ತಾಪ ಮಾಡಿ ಹೂಳೆತ್ತಬೇಕೆಂದು ಕೇಳುತ್ತಾ ಬಂದಿದ್ದೇನೆ. ಮೀನುಗಾರರೂ ಸಹ ಪದೇಪದೇ ಮನವಿ ಸಲ್ಲಿಸಿರುತ್ತಾರೆ. ಆದರೆ ಮೀನುಗಾರಿಕಾ ಇಲಾಖೆ ಸಂಪೂರ್ಣ ಉದಾಸೀನತೆಯಿಂದ ಕಣ್ಮುಚ್ಚಿ ಕುಳಿತಿದೆ, ಮಂಗಳೂರು ಪಳಿಬಂದರಿನ ಅಧಿಕಾರಿಗಳು ಅತ್ಯಂತ ನಿರ್ಲಕ್ಷ್ಯತನದಿಂದ ಹಾಯಾಗಿ ಇದ್ದಾರೆ. ಈಗ ಮೀನುಗಾರರು ತುಂಬಾ ಕಂಗಾಲಾಗಿ ಉದ್ರೇಕಗೊಂಡಿರುತ್ತಾರೆ. ಧರಣಿ, ಪುಂಪ್ಕರ ಮಾಡಿ ಅವರು ಹೋರಾಟಕ್ಕೆ ಮುಂದಾಗುತ್ತಿದ್ದಾರೆ. ಹೂಳೆತ್ತುವ ಕೆಲಸ ತುರ್ತಾಗಿ ಅತೀ ಜರೂರಾಗಿ ಮಾಡು ವಂತಾಗಬೇಕು. ಈ ಕುರಿತು ಮಾನ್ಯ ಮೀನುಗಾರಿಕಾ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೃಷ್ಣಾ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು).—ಮಂಗಳೂರು ಹಳೇ ಬಂದರಿನ ಅಳಿವೆ ಬಾಗಿಲಿನಲ್ಲಿ ಕಳೆದ ನಾಲ್ಕು ವರ್ಷಗಳಿಂದ ಎರುಳು ದಿಣ್ಣೆಗೆ ತಾಗಿ ಕೆಲವು ಮೀನುಗಾರರ ದೋಣಿಗಳು ಅಪಘಾತಕ್ಕೆ ಒಳಗಾಗಿವೆ. ೧೯೮೮ನೇ ಸೆಪ್ಟೆಂಬರ್ ಮೊಹಲ್ ದಿನಾಂಕ ೨೫.೨೬.೨೯ರ ಅವಧಿಯಲ್ಲಿ ಒಟ್ಟು ೧೨ ಯಾಂತ್ರಿಕ ಮೀನುಗಾರಿಕಾ ದೋಣಿಗಳು ಅಪಘಾತಕ್ಕೆ ಒಳಗಾಗಿದ್ದು, ಇಬ್ಬರು ಮೀನುಗಾರರು ಮೃತಪಟ್ಟಿರುತ್ತಾರೆ. ಅಪಘಾತಕ್ಕೆ ಈಡಾದ ಮೀನುಗಾರಿಕೆ ದೋಣಿಗಳ ನಷ್ಟ ಸುಮಾರು ೧೬ ಲಕ್ಷಗಳೆಂದು ಅಂದಾಜಿಸಲಾಗಿದೆ.

ಈ ಬಗ್ಗೆ ಮಾನ್ಯ ಸದಸ್ಯರು ವಿಧಾನ ಮಂಡಲದಲ್ಲಿ ಪ್ರಸ್ತಾಪಿಸಿರುವುದು ಸರಿಯಾಷ್ಟೆ. ಆದರೆ ಸರ್ಕಾರವು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲವೆನ್ನುವುದು ಸರಿಯಲ್ಲ. ೧೯೮೬-೮೭ರಲ್ಲಿ ಕೇರಳ ಸರ್ಕಾರದಿಂದ ಡ್ರಜ್ಜರ್ಸ್‌ನ್ನು ಪಡೆಯಲು ಪ್ರಯತ್ನಿಸಲಾಯಿತು. ಆದರೆ ಈ ಡ್ರಜ್ಜರ್ ನಮ್ಮ ಬಳಕೆಗೆ ದೊರೆಯಲಿಲ್ಲ. ನಂತರ ಎಸ್.ಆರ್. ಡ್ರಜ್ಜಿಂಗ್ ಕಾರ್ಪೋರೇಷನ್, ಬಾಂಬೆ ಅವರಿಗೆ ಹೂಳೆತ್ತುವ ಕೆಲಸವನ್ನು ವಹಿಸಲಾಯಿತು. ಈ ಕಂಪನಿಯವರು ಈ ಕಾಮಗಾರಿಯನ್ನು ಮಾಡಲಿಲ್ಲ. ಇತ್ತೀಚೆಗೆ ಮೆಸರ್ಸ್ ಬೊನ್‌ಡ್ರಜ್ಜಿಂಗ್ ಕಂಪನಿ, ಕಲ್ಕತ್ತ ಇವರಿಗೆ ಈ ಕೆಲಸವನ್ನು ವಹಿಸಲಾಗಿದ್ದು, ಅವರೂ ಕೂಡ ಈ ಕಾರ್ಯವನ್ನು ನಿರ್ವಹಿಸಲಿಲ್ಲ. ಈಗ ಈ ಕೆಲಸವನ್ನು ಡ್ರಜ್ಜಿಂಗ್ ಕಾರ್ಪೊರೇಷನ್ ಆಫ ಇಂಡಿಯಾ ಅವರಿಗೆ ವಹಿಸಲಾಗಿದ್ದು ಮತ್ತು ಕಾಮಗಾರಿಯನ್ನು ಕೂಡಲೇ ಕೈಗೊಳ್ಳುವ ನಿರೀಕ್ಷೆ ಇದೆ.

5. ದಾವಣಗೆರೆ ಮೋತಿ ವೀರಪ್ಪ ಪದವೀಪೂರ್ವ ಕಾಲೇಜು ಕಟ್ಟಡ ಶಿಥಿಲಗೊಂಡಿರುವುದು

† ಶ್ರೀ ಪಂಪಾಪತಿ (ದಾವಣಗೆರೆ)—ಮಾನ್ಯ ಅಧ್ಯಕ್ಷರೇ, ದಾವಣಗೆರೆಯಲ್ಲಿ ಮೋತಿ ವೀರಪ್ಪ ಸರ್ಕಾರಿ ಪದವಿಪೂರ್ವ ಕಾಲೇಜು ಅನೇಕ ವರ್ಷಗಳಿಂದ ಹಳೆಯ ಕಟ್ಟಡದಲ್ಲಿ ನಡೆಯುತ್ತಿತ್ತು. ಆದರೆ ಆ ಕಾಲೇಜಿನ ಕಟ್ಟಡ ಈಗ ಶಿಥಿಲಗೊಂಡಿದ್ದು, ಈ ವರ್ಷ ಮಳೆ ಹೆಚ್ಚಾದ ಕಾರಣ ಆ ಕಟ್ಟಡದ ಮೇಲ್ಛಾವಣಿ ಬಿದ್ದು ಹೋಗುವ ಸ್ಥಿತಿಯಲ್ಲಿದೆ, ಲೋಕೋಪಯೋಗಿ ಇಲಾಖೆ ಮುಖ್ಯ ಇಂಜಿನಿಯರ್‌ರವರು ಸ್ಥಳಕ್ಕೆ ಭೇಟಿ ಕೊಟ್ಟು ಸ್ಥಳ ಪರಿಶೀಲಿಸಿ, ಕಟ್ಟಡ ತುಂಬಾ ಶಿಥಿಲವಾಗಿದೆ ಕೂಡಲೇ ಆ ಕಟ್ಟಡದಲ್ಲಿ ಶಾಲೆ ನಡೆಸುವುದು ಆಪಾಯಕಾರಿ. ಮೇಲೆ ಚಾವಣಿ ಬಿದ್ದು ಮಕ್ಕಳ ಪ್ರಾಣಹಾನಿ ಆಗುವ ಸಂಭವ ಇದೆ, ಆದ್ದರಿಂದ ಆ ಕಟ್ಟಡದಲ್ಲಿ ಶಾಲೆ ನಡೆಸಕೂಡದೆಂದು ಕಾಲೇಜಿನ ಪ್ರಾಧಾಪಕರಿಗೆ ಪತ್ರ ಬರೆದಿದ್ದಾರೆ ಮತ್ತು ತಂತಿ ಸಂದೇಶ ಕಳುಹಿಸಿದ್ದಾರೆ. ಇದರಿಂದ ಕಾಲೇಜನ್ನು ನಡೆಸಲು ಮತ್ತು ಪ್ರಯೋಗಾಲಯದ ಲಕ್ಷಾಂತರ ರೂಪಾಯಿಗಳ ಬೆಲೆ ಬಾಳುವ ವಸ್ತುಗಳು ಹಾಳಾಗಿ ಹೋಗುವ ಸಂಭವ ಹೆಚ್ಚಾಗಿದೆ. ಇದರಿಂದ ಆ ಶಾಲೆಯಲ್ಲಿ ಓದುವ ಮಕ್ಕಳ ಪ್ರಾಣ ಮತ್ತು ಅವರ ಭವಿಷ್ಯದ ಬಗ್ಗೆ ಸರ್ಕಾರ ಹೆಚ್ಚು ಗಮನಹರಿಸಿ, ಕೂಡಲೇ ಮೇಲ್ಕಂಡ ಕಟ್ಟಡ ದುರಸ್ತಿ ಕಾರ್ಯವನ್ನು ಮಾಡಿಕೊಡುವುದರೆ ಪೂಲಕ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.